# ಕುವೆಂಪು ವಿಶ್ವವಿದ್ಯಾಲಯ

**ಕುಲಸಚಿವರು**

ವಿಶ್ವವಿದ್ಯಾಲಯಕಾರ್ಯಾಲಯ
ಜ್ಞಾನಸಹ್ಯಾದ್ರಿ, ಶಂಕರಘಟ್ಟ - 577451
ಶಿವಮೊಗ್ಗಜಿಲ್ಲೆ, ಕರ್ನಾಟಕ

ಸಂಖ್ಯೆ: ಕುವಿ/ಪ.ಜಾ:ಪ.ಪಂ.ಘ-2/ 70 / 2025-26/

ದಿನಾಂಕ: 14-07-2025

## ಪ್ರಕಟಣೆ

**ವಿಷಯ: ಅಂತಿಮ ವರ್ಷದಲ್ಲಿ ವ್ಯಾಸಂಗ ಮಾಡುತ್ತಿರುವ ಪರಿಶಿಷ್ಟ ಜಾತಿ: ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳು** ಕ್ಷೇತ್ರಕಾರ್ಯ (Project Work) **ಕೈಗೊಳ್ಳಲು ಪ್ರೋತ್ಸಾಹಧನಕ್ಕಾಗಿ ಅರ್ಜಿಯನ್ನು ಸಲ್ಲಿಸುವ ಕುರಿತು.**

-*****-

2024–25ನೇ ಶೈಕ್ಷಣಿಕ ಸಾಲಿನಲ್ಲಿ ವಿಶ್ವವಿದ್ಯಾಲಯದ ಆವರಣ, ಸ್ನಾತಕೋತ್ತರ ಕೇಂದ್ರ ಹಾಗೂ ಘಟಕ ಕಾಲೇಜಿನ ವಿವಿಧ ಸ್ನಾತಕೋತ್ತರ ಅಧ್ಯಯನ ವಿಭಾಗಗಳ ಅಂತಿಮ ವರ್ಷದಲ್ಲಿ ವ್ಯಾಸಂಗ ಮಾಡುತ್ತಿರುವ ಹಾಗೂ ಪೋಷಕರ ಆದಾಯ ರೂ. 2.50 ಲಕ್ಷಗಳ ಮಿತಿಯೊಳಗಿದ್ದು, ವಿದ್ಯಾರ್ಥಿವೇತನಕ್ಕೆ ಅರ್ಹರಿರುವ ಪರಿಶಿಷ್ಟ ಜಾತಿ: ಪರಿಶಿಷ್ಟ ಪಂಗಡಕ್ಕೆ ಸೇರಿದ ವಿದ್ಯಾರ್ಥಿಗಳು ತಮ್ಮ ಅಧ್ಯಯನಕ್ಕೆ ಪೂರಕವಾದ ಶೈಕ್ಷಣಿಕ ಪ್ರವಾಸ (Project Work) ಕೈಗೊಳ್ಳಲು ಪ್ರತಿ ವಿದ್ಯಾರ್ಥಿಗೆ ತಲಾ **ರೂ.2,000/–**ಗಳ (ರೂಪಾಯಿ ಎರಡು **ಸಾವಿರ** ಮಾತ್ರ) ಪ್ರೋತ್ಸಾಹ ಧನವನ್ನು ನೀಡಲಾಗುವುದು.

ಆದ್ದರಿಂದ, ಸದರಿ ಸಹಾಯಧನವನ್ನು ಪಡೆಯಲು ಬಯಸುವ ವಿಭಾಗದ ವಿದ್ಯಾರ್ಥಿಗಳು ಕ್ಷೇತ್ರಕಾರ್ಯ ಕೈಗೊಂಡ ಬಗ್ಗೆ **ಅರ್ಜಿ ಸಲ್ಲಿಸುವುದು**. ನಿಗದಿತ ಅರ್ಜಿಯನ್ನು ಆನ್ಲೈನ್ ಮೂಲಕ Google Format ನಲ್ಲಿ ಆಹ್ವಾನಿಸಲಾಗಿದೆ. ಅರ್ಹ ಪರಿಶಿಷ್ಟ ಜಾತಿ : ಪರಿಶಿಷ್ಟ ಪಂಗಡಗಳ ವಿದ್ಯಾರ್ಥಿಗಳು ಅರ್ಜಿಯನ್ನು ವಿಶ್ವವಿದ್ಯಾನಿಲಯದ ಅಂತರ್ಜಾಲ ವಿಳಾಸ:- http://www.kuvempu.ac.in

↓

***SC/ST downloads*** ರಲ್ಲಿ

↓

**Google Format** ನ ಮೂಲಕ

**Google Format Link :** https://forms.gle/QEHB3JZ6wiGE2UVM8

ಅರ್ಜಿಗಳನ್ನು ಆನ್ಲೈನ್ ಮೂಲಕವೇ ಭರ್ತಿ ಮಾಡಿ **ದಿನಾಂಕ:12-08-2025** ರೊಳಗಾಗಿ ***Submit*** ಮಾಡಲು ತಿಳಿಸಲಾಗಿದೆ. ನಿಗದಿತ ದಿನಾಂಕದ ನಂತರ ಸಲ್ಲಿಸುವ ಅರ್ಜಿಗಳನ್ನು ಯಾವುದೇ ಕಾರಣಕ್ಕೂ ಸ್ವೀಕರಿಸಲಾಗುವುದಿಲ್ಲ/ ಪರಿಗಣಿಸಲಾಗುವುದಿಲ್ಲ.

ತಾವು ಭರ್ತಿ ಮಾಡಲಾದ ವಿವರವನ್ನು ಅರ್ಜಿ ರೂಪದಲ್ಲಿ ತಮ್ಮ ಇ–ಮೇಲ್ ವಿಳಾಸಕ್ಕೆ ಮರು ಸಲ್ಲಿಸಲಾಗುವುದು. ಸದರಿ ಅರ್ಜಿಯನ್ನು ಪರಿಶೀಲಿಸಿ ಮುದ್ರಿಸಿಕೊಂಡ ನಂತರ ಅರ್ಜಿ ನಮೂನೆಯನ್ನು ಅಗತ್ಯ ದಾಖಲಾತಿಗಳೊಂದಿಗೆ ಆಯಾ ವಿಭಾಗಕ್ಕೆ ಸಲ್ಲಿಸುವುದು. ಆಯಾ ವಿಭಾಗದ ಮುಖ್ಯಸ್ಥರು ಸ್ವೀಕೃತವಾದ ಅರ್ಜಿಗಳನ್ನು ಕ್ರೋಢೀಕರಿಸಿ, ಕ್ಷೇತ್ರಕಾರ್ಯ ಕೈಗೊಂಡಿರುವ ಬಗ್ಗೆ ದೃಢೀಕರಣದೊಂದಿಗೆ ಪರಿಶಿಷ್ಟ ಜಾತಿ : ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ಘಟಕದ ಕಛೇರಿಗೆ **ದಿನಾಂಕ: 22-08-2024** ರೊಳಗಾಗಿ ಕಳುಹಿಸುವುದು.

**ಕರಡು ಕುಲಸಚಿವರಿಂದ**
**ಅನುಮೋದನೆಯಾಗಿದೆ.**

ಸಂಚಾಲಕರು

ಸಂಚಾಲಕರು
ಪರಿಶಿಷ್ಟಜಾತಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ಘಟಕ
ಕುವೆಂಪು ವಿಶ್ವವಿದ್ಯಾಲಯ
ಜ್ಞಾನ ಸಹ್ಯಾದ್ರಿ. ಶಂಕರಘಟ್ಟ - 577 451
ಶಿವಮೊಗ್ಗ ಜಿಲ್ಲೆ.

15/7/25

ಗೆ,

1) ಎಲ್ಲಾ ಸ್ನಾತಕೋತ್ತರ ಅಧ್ಯಯನ ವಿಭಾಗಗಳ ಅಧ್ಯಕ್ಷರು, ಕುವೆಂಪು ವಿಶ್ವವಿದ್ಯಾಲಯ, ಜ್ಞಾನಸಹ್ಯಾದ್ರಿ, ಶಂಕರಘಟ್ಟ
2) ಪ್ರಾಂಶುಪಾಲರು, ಸಹ್ಯಾದ್ರಿ ವಿಜ್ಞಾನ, ಕಲಾ ಹಾಗೂ ವಾಣಿಜ್ಯ ಕಾಲೇಜು, ಶಿವಮೊಗ್ಗ
3) ವಿಭಾಗದ ಮುಖ್ಯಸ್ಥರು, ಸ್ನಾತಕೋತ್ತರ ಕೇಂದ್ರ, ಕಡೂರು ಹಾಗೂ ಚಿಕ್ಕಮಗಳೂರು.

ಪ್ರತಿಗಳು:

1) ಮಾನ್ಯ ಕುಲಪತಿಗಳು/ಕುಲಸಚಿವರು/ಹಣಕಾಸು ಅಧಿಕಾರಿಗಳ ಆಪ್ತಕಾರ್ಯಾಲಯ, ಕುವೆಂಪು ವಿಶ್ವವಿದ್ಯಾಲಯ, ಜ್ಞಾನಸಹ್ಯಾದ್ರಿ, ಶಂಕರಘಟ್ಟ.
2) ಕಛೇರಿ ಪ್ರತಿ/ ಹುಂಡಿಪ್ರತಿ.